# ವಾರ್ತಾ ವಿಶ್ಲೇಷಣೆ

## ತಾಯ್ತನದ ಹಿರಿಮೆ

ಸ್ತ್ರೀಯರಲ್ಲಿ ತಾಯ್ತನದ ಪ್ರವೃತ್ತಿ ತುಂಬ ಪ್ರಬಲವಾಗಿರುತ್ತವೆ ಎಂದು ಮನಶ್ಶಾಸ್ತ್ರಜ್ಞರು ಹೇಳುತ್ತಾರೆ. ಭಾರತದಲ್ಲಿ ಸ್ತ್ರೀಯರನ್ನು ಪ್ರಧಾನವಾಗಿ 'ತಾಯಿ' ಎಂದು ಪರಿಗಣಿಸುವುದು ರೂಢಿ. (ಈಗ ಪರಿಸ್ಥಿತಿ ಬದಲಾಗುತ್ತಿರಬಹುದು.) ಈ ತಾಯ್ತನದ ಪ್ರವೃತ್ತಿ ಈಗ ಅಮೆರಿಕದಲ್ಲಿ ಹೊಸ ರೂಪದಲ್ಲಿ ವ್ಯಕ್ತವಾಗುತ್ತಿರುವುದು ಕಂಡುಬರುತ್ತಿದೆ. ಅಲ್ಲಿಯ ಬಂದೂಕು ಸಂಸ್ಕೃತಿಯ (*Gun culture*) ವಿರುದ್ಧವಾಗಿ ತಾಯಂದಿರು ತೀವ್ರ ಚಳುವಳಿಯನ್ನು ನಡೆಸುತ್ತಿದ್ದಾರೆ. ಅಮೆರಿಕದಲ್ಲಿ ಪಿಸ್ತೂಲು ಇಟ್ಟುಕೊಳ್ಳುವ ಹಕ್ಕು ಎಲ್ಲರಿಗೂ ಇದೆ. ಇದರಿಂದಾಗಿ ಚಿಕ್ಕ ಮಕ್ಕಳೂ ಸುಲಭವಾಗಿ ಹಿಂಸಾತ್ಮಕ ಕಾರ್ಯದಲ್ಲಿ ತೊಡಗುತ್ತಾರೆ. ಇವಕ್ಕೆ ಬಲಿಯಾಗುವವರೂ ಅಧಿಕವಾಗಿ ಮಕ್ಕಳೆ. ಈ ರೀತಿ ಮಕ್ಕಳನ್ನು ಕಳೆದುಕೊಂಡ, ಮಕ್ಕಳ ಹಿಂಸೆಯಿಂದ ನೊಂದ ತಾಯಂದಿರು ಬಂದೂಕು ನಿರೋಧ ಪರವಾಗಿ ಚಳುವಳಿ ನಡೆಸುತ್ತಿದ್ದಾರೆ.

ಇದೇ ಮೇ ತಿಂಗಳಿನಲ್ಲಿ ವಾಷಿಂಗ್‌ಟನ್‌ನಲ್ಲಿ ಅವರ ಬೃಹತ್ ರ‍್ಯಾಲಿ ನಡೆಯಿತು. ಅದರಲ್ಲಿ ೧೫,೦೦೦೦ ತಾಯಂದಿರು ಭಾಗವಹಿಸಿದ್ದರೆಂದೂ, ಬಂದೂಕು ನಿರೋಧ ಪರವಾಗಿ ನಡೆದ ಅತಿದೊಡ್ಡ ರ‍್ಯಾಲಿ ಇದೆಂದೂ '*Time*' (ಮೇ ೧೫) ಪತ್ರಿಕೆ ವರದಿ ಮಾಡುತ್ತದೆ. ಶೇಕಡ ೨೨ ಪುರುಷರು ಅಮೆರಿಕದಲ್ಲಿ ಬಂದೂಕು ನಿರೋಧವನ್ನು ಅನುಮೋದಿಸಿದರೆ ಶೇಕಡ ೭೨ ಮಹಿಳೆಯರು ಅದನ್ನು ಅನುಮೋದಿಸುವವರೆಂದು ವರದಿ ತಿಳಿಸುತ್ತದೆ. ದೇಶಾದ್ಯಂತ ಇಂತಹ ೬೦ ರ‍್ಯಾಲಿಗಳನ್ನು ನಡೆಸಲಾಯಿತು.

ಮಕ್ಕಳಿಗೆ ತಾಯಿಯೇ ಪರಮ ರಕ್ಷೆ. 'ತಾಯಿಯಲ್ಲಿ ದಯೆಯಿಲ್ಲದಿದ್ದರೆ ಇಡೀ ಪೃಥ್ವಿಯೇ ಶುಷ್ಕವಾಗಿ ಹೋಗುತ್ತದೆ' ಎಂದು ಬಂಗಾಳಿ ಹಾಡೊಂದು ಹೇಳುತ್ತದೆ. ಶ್ರೀಮಾತೆ ಶಾರದಾ ದೇವಿಯವರು ಹೇಳುತ್ತಾರೆ : 'ನಾನು ಸಜ್ಜನರ ತಾಯಿ, ದುರ್ಜನರ ತಾಯಿಯೂ ಹೌದು. ನೀನು ಸಂಕಟದಲ್ಲಿದ್ದಾಗ ನಿನ್ನೊಳಗೇ ನೀನು ಹೇಳಿಕೋ : "ನನಗೊಬ್ಬಳು ತಾಯಿಯಿದ್ದಾಳೆ" ಎಂದು.'

## ಲಜ್ಜಾ ಸಮಸ್ಯೆ

ಶ್ರೀರಾಮಕೃಷ್ಣರು ಹೇಳುತ್ತಿದ್ದರು, ಭಗವಂತನನ್ನು ಪಡೆಯಲು ಲಜ್ಜೆ, ಭಯ ಮತ್ತು ಘೃಣ (ತಿರಸ್ಕಾರ ಮನೋಭಾವ) — ಈ ಮೂರೂ ಇರಬಾರದು ಎಂದು. ಗೋಪಿಯರ ಲಜ್ಜಾ ಸ್ವಭಾವವನ್ನು ಹೋಗಲಾಡಿಸುವುದಕ್ಕಾಗಿಯೇ ಶ್ರೀಕೃಷ್ಣನು ಅವರ ವಸ್ತ್ರಾಪಹರಣ ಮಾಡಿದನೆಂಬ ಸಿದ್ಧಾಂತವೂ ಇದೆ. ದುಷ್ಕೃತ್ಯಗಳನ್ನು ಮಾಡುವ ವಿಚಾರದಲ್ಲಿ ಲಜ್ಜೆ ಇರುವುದು ಒಳ್ಳೆಯದೇ. ಆದರೆ ದುಷ್ಟರೇ ಶಿಷ್ಟರಂತೆ ಮೆರೆಯಬಹುದಾದ (ಭಾರತದಂತಹ) ಸಾಮಾಜಿಕ ಪರಿಸ್ಥಿತಿಯಲ್ಲಿ ಲಜ್ಜೆ ಹೆಜ್ಜೆಹಾಕುವುದೇ ಇಲ್ಲ—ಅದರ ಬದಲು ನಿರ್ಲಜ್ಜೆ ಗೆಜ್ಜೆ ಕಟ್ಟಿಕೊಂಡು ಕುಣಿಯಬಹುದು.

ನಿರ್ಲಜ್ಜೆ ಮನುಷ್ಯನನ್ನು ಕೀಳಾಗಿ ಮಾಡುತ್ತದೆಯಾದರೂ, ಅತಿಲಜ್ಜೆ ಅವನ ಪ್ರಗತಿಗೆ ಮಾರಕವಾಗುತ್ತದೆ. ಈ ಅತಿಲಜ್ಜೆ ಹೊಸ ವ್ಯಕ್ತಿಗಳ ಪರಿಚಯ ಮಾಡಿಕೊಳ್ಳುವುದಕ್ಕೆ ತಡೆಯಾಗುತ್ತದೆ, ಅಪರಿಚಿತರಿಂದ ದೂರವಿರುವಂತೆ ಮಾಡುತ್ತದೆ, ಸಂದರ್ಶನ ಮುಂತಾದವುಗಳಲ್ಲಿ ವ್ಯಕ್ತಿಯು ತನ್ನ ನೈಜ ಸಾಮರ್ಥ್ಯವನ್ನು ವ್ಯಕ್ತಪಡಿಸಲು ಅಸಮರ್ಥನಾಗುವಂತೆ ಮಾಡುತ್ತದೆ. ಅಂತೂ ವ್ಯಕ್ತಿಯ ಏಳ್ಗೆಗೆ ಅದು ಪ್ರತಿಬಂಧಕವಾಗುತ್ತದೆ. ಮನಶ್ಶಾಸ್ತ್ರಜ್ಞರು ಈ ಸ್ವಭಾವವನ್ನು ಸೋಸಿಯಲ್ ಫೋಬಿಆ (*Social phobia*) ಎಂದು ಕರೆಯುತ್ತಾರೆ. ಇಂದಿನ ಇಂಟರ್‌ನೆಟ್ ಸಂಸ್ಕೃತಿಯಿಂದಾಗ ನೇರ ಜನಸಂಪರ್ಕ ಕಡಮೆಯಾಗುವುದರಿಂದ ಈ ಲಜ್ಜಾ ಸ್ವಭಾವ ಹೆಚ್ಚಬಹುದೆಂದು ಕೆಲವು ಮನಶ್ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ ಎಂಬುದಾಗಿ ರೀಡರ್ಸ್ ಡೈಜೆಸ್ಟ್ (ಏಪ್ರಿಲ್, ೨೦೦೦) ವರದಿ ಮಾಡುತ್ತದೆ.

ಲಜ್ಜೆ ಎಲ್ಲರಿಗೂ ಸಮಾನವಾದುದಾದರೂ ಅದೊಂದು ಮಾನಸಿಕ ರೋಗವಾಗಿ ಪರಿಗಣಿಸಲ್ಪಡುತ್ತಿರುವುದು ಇತ್ತೀಚೆಗೆ ಮಾತ್ರ. ಬದಲಾದ ಸಾಮಾಜಿಕ ಪರಿಸ್ಥಿತಿಯಿಂದಾಗಿ ಈ ಸಮಸ್ಯೆ ತೀವ್ರವಾಗುತ್ತಿರುವಂತೆ ಕಂಡುಬರುತ್ತದೆ. ಅಥವಾ ಇಂದು ಸಾಮಾಜಿಕ ಸಂಪರ್ಕ ಹೆಚ್ಚು ಹೆಚ್ಚು ಬೆಳೆಯುತ್ತಿರುವುದರಿಂದ ಈ ಸಮಸ್ಯೆ ಹೆಚ್ಚು ಸ್ಪಷ್ಟವಾಗಿ ಎದ್ದು ಕಾಣುತ್ತಿರಬಹುದು.

ನಮ್ಮಲ್ಲಿ ವೈಯಕ್ತಿಕ ಘನತೆ, ಆತ್ಮಗೌರವ ಇರಬೇಕು. ಆಗ ನಾವು ಕೆಟ್ಟದ್ದು ಮಾಡಿದರೆ ನಮಗೆ ನಾವೇ ನಾಚಿಕೆ ಪಟ್ಟುಕೊಳ್ಳುವಂತಾಗುತ್ತದೆ, ಹಾಗೂ ಸೋಸಿಯಲ್ ಫೋಬಿಆ ಕೂಡ ನಮ್ಮನ್ನು ಹೆಚ್ಚು ಬಾಧಿಸದು.

### ಆಶ್ರಮದ ವಿಶೇಷ ಕಾರ್ಯಕ್ರಮಗಳು

ಸೆಪ್ಟೆಂಬರ್

| | | |
|---|---|---|
| 01 | ಶುಕ್ರವಾರ | ವಿನಾಯಕ ಚತುರ್ಥಿ |
| 22 | ಶುಕ್ರವಾರ | ಸ್ವಾಮಿ ಅಭೇದಾನಂದ ಜಯಂತಿ |
| 27 | ಬುಧವಾರ | ಸ್ವಾಮಿ ಅಖಂಡಾನಂದ ಜಯಂತಿ |
| 27 | ಬುಧವಾರ | ಮಹಾಲಯ ಅಮಾವಾಸ್ಯೆ |

*ಕಾಲೇಜಿನ ವಿದ್ಯಾರ್ಥಿ— ವಿದ್ಯಾರ್ಥಿನಿಯರಿಗೆ ವ್ಯಕ್ತಿತ್ವ ವಿಕಸನ ಶಿಬಿರ*

17 ಹಾಗೂ 24 ಸೆಪ್ಟೆಂಬರ್ 2000 ಭಾನುವಾರ

ಬೆಳಗ್ಗೆ 8.30 ರಿಂದ ಮಧ್ಯಾಹ್ನ 1. 30ರ ವರೆಗೆ

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ